ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 03 ಸಿಡಿಸಿ (2) 2017–18 1693

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು–560 001
ದಿನಾಂಕ: 24–06–2017

## –:ನಿರಾಕ್ಷೇಪಣಾ ಪತ್ರ:–

ವಿಷಯ: 2017–18ನೇ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ ಎಂ.ಟೆಕ್/ಎಂ.ಇ ಉನ್ನತ ವ್ಯಾಸಂಗದ ಸಲುವಾಗಿ PGCET-2017ಗೆ ಅರ್ಜಿ ಸಲ್ಲಿಸಲು ಹಾಗೂ ಪರೀಕ್ಷೆ ಬರೆಯಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ: ವಿವಿಧ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಂದ ಬಂದ ಮನವಿ ಪತ್ರಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017–18ನೇ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ ಎಂ.ಟೆಕ್/ಎಂ.ಇ ಉನ್ನತ ವ್ಯಾಸಂಗದ ಸಲುವಾಗಿ ಕೆ ಇ ಎ ಬೆಂಗಳೂರು, ಇದರ ಮೂಲಕ PGCET-2017ಗೆ ಅರ್ಜಿ ಸಲ್ಲಿಸಲು ಹಾಗೂ ಪರೀಕ್ಷೆ ಬರೆಯಲು ಈ ಕೆಳಕಂಡ ಉಪನ್ಯಾಸಕರುಗಳಿಗೆ ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇಲ್ಲವೆಂದು ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

| ಕ್ರ. ಸಂ. | ಹೆಸರು ಹಾಗೂ ಪದನಾಮ ಶ್ರೀ/ಶ್ರೀಮತಿ | ವಿಭಾಗ | ಸೇವೆಗೆ ಸೇರಿದ ದಿನಾಂಕ | ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ |
|---|---|---|---|---|
| 1 | ಪ್ರಿಯದರ್ಶಿನಿ ಹೊನ್ನತ್ತಿ ಉಪನ್ಯಾಸಕರು | ಇ & ಸಿ | 05–10–2012 | ಸರ್ಕಾರಿ ಪಾಲಿಟೆಕ್ನಿಕ್ ಜೋಯಿಡಾ |
| 2 | ರವಿ ಎಂ ಉಪನ್ಯಾಸಕರು | ಇ & ಸಿ | 27–09–2012 | ಸರ್ಕಾರಿ ಪಾಲಿಟೆಕ್ನಿಕ್ ಉಡುಪಿ |
| 3 | ಅಶ್ವಿನಿ ಎಂ. ಎಸ್. ಉಪನ್ಯಾಸಕರು | ಗಣಕಯಂತ್ರ | 06–05–2008 | ಸರ್ಕಾರಿ ಪಾಲಿಟೆಕ್ನಿಕ್ ಚನ್ನಪಟ್ಟಣ |
| 4 | ಸ್ವಾತಿ ಬಿ. ಎಸ್. ಉಪನ್ಯಾಸಕರು | ಇ & ಸಿ | ---- | ಸರ್ಕಾರಿ ಪಾಲಿಟೆಕ್ನಿಕ್ ಬೇಲೂರು |

ಕೆ.ಸಿ.ಎಸ್.ಆರ್. ನಿಯಮ 61(3) ಹಾಗೂ ಅಪೆಂಡಿಕ್ಸ್ 2ಎ ನಿಯಮ Iರ ಉಪನಿಯಮ (1) ರಿಂದ (10)ರನ್ವಯ ಮತ್ತು ಅಪೆಂಡಿಕ್ಸ್ 2ಎ ನಿಯಮ IIರ ಉಪನಿಯಮ (1) ರಿಂದ (5)ರನ್ವಯ ಪೂರ್ಣಕಾಲಿಕ ನೆಲೆಯಲ್ಲಿ M.E/M.Tech (FullTime) ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಐದು ವರ್ಷಗಳ ಸಕ್ರಮ ಸೇವೆಯನ್ನು ಹಾಗೂ ಅರೆಕಾಲಿಕ ನೆಲೆಯಲ್ಲಿ M.E/M.Tech (QIP/Part Time) ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಮೂರು ವರ್ಷಗಳ ಸಕ್ರಮ ಸೇವೆಯನ್ನು ಹಾಗೂ ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು ಮತ್ತು ವಯೋಮಿತಿ 48 ವರ್ಷದ ಒಳಗಿರಬೇಕು. ಈ ಹಿಂದೆ ಯಾವುದೇ ಉನ್ನತ ವ್ಯಾಸಂಗದ ಪೂರ್ಣಕಾಲಿಕ ನಿಯೋಜನೆ ಸೌಲಭ್ಯವನ್ನು ಪಡೆದಿರುವುದಿಲ್ಲವೆಂದು ಹಾಗೂ ವಿಭಾಗದಲ್ಲಿ ಸೂಕ್ತ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು ಸದರಿಯವರ ನಿಯೋಜನೆಯಿಂದ ಯಾವುದೇ ತೊಂದರೆಯಾಗುವುದಿಲ್ಲವೆಂದು ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸತಕ್ಕದ್ದು.

--2

ಪ್ರಾಚಾರ್ಯರು, ಅಂತಿಮವಾಗಿ 2017-18ನೇ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ ಎಂ.ಟೆಕ್/ಎಂ.ಇ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರ ಪ್ರಸ್ತಾವನೆಯನ್ನು ಸರ್ಕಾರದ/ಇಲಾಖೆಯ ಅನುಮೋದನೆಗಾಗಿ ಸಲ್ಲಿಸುವಾಗ ಕೆ ಸಿ ಎಸ್ ಅರ್ ನಿಯಮ 61(3) ರ Appendix – 2 'ಎ' ಯ ನಿಯಮ 1 ರ ಉಪನಿಯಮ (1) ರಿಂದ (10) ರಲ್ಲಿ ನಮೂದಿಸಲಾದ ನಿಯಮಾನುಸಾರ ಎಲ್ಲಾ ದಾಖಲೆಗಳನ್ನು ಹಾಗೂ ಈ ಕಚೇರಿ ಸುತ್ತೋಲೆ ಸಂಖ್ಯೆ: ಡಿಟಿಇ 26 ಸಿಡಿಸಿ(2)2016-17,ದಿನಾಂಕ:14-07-2016ರಲ್ಲಿ ಸೂಚಿಸಿರುವಂತೆ, ಸೂಕ್ತ ಶಿಫಾರಸ್ಸಿನೊಂದಿಗೆ ದಾಖಲೆಗಳನ್ನು ಹಾಗೂ ಮಾಹಿತಿಗಳನ್ನು ದ್ವಿ-ಪ್ರತಿಗಳಲ್ಲಿ ದೃಢೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ಸದರಿ ನಿರಾಕ್ಷೇಪಣಾ ಪತ್ರವೇ ಅಂತಿಮ ಅನುಮತಿ ಪತ್ರ ಎಂದು ಪರಿಗಣಿಸಬಾರದು. ಪೂರ್ಣಕಾಲಿಕ ಉನ್ನತ ವ್ಯಾಸಂಗಕ್ಕೆ ಸರ್ಕಾರದ ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

ಜಂಟಿ ನಿರ್ದೇಶಕರು(ಸಿಡಿಸಿ)

24/6/17

ಇವರಿಗೆ: 1. ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ, ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.

ಪ್ರತಿ: ಮೇಲ್ಕಂಡ ಉಪನ್ಯಾಸಕರುಗಳಿಗೆ, ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರ ಮುಖಾಂತರ.